# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **1134** |
| ಸದಸ್ಯರ ಹೆಸರು | : | ಶ್ರೀ ಮುನಿರಾಜು ಗೌಡ ಪಿ.ಎಂ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 23-02-2024 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಪ್ರಧಾನಮಂತ್ರಿ ಕೃಷಿ ಸಮ್ಮಾನ್ ಯೋಜನೆಯಲ್ಲಿ ಇರುವ ಅರ್ಹ ಫಲಾನುಭವಿಗಳೆಷ್ಟು; ಕೇಂದ್ರ ಸರ್ಕಾರದಿಂದ ವಾರ್ಷಿಕವಾಗಿ ಅವರಿಗೆ ಸದರಿ ಯೋಜನೆಯಲ್ಲಿ ದೊರೆಯತ್ತಿದ್ದ ಹಣವೆಷ್ಟು; | ಪಿ.ಎಂ.ಕಿಸಾನ್ ಯೋಜನೆಯಡಿ ಇದುವರೆವಿಗೂ 54,12,839 ರೈತ ಕುಟುಂಬಗಳು ನೋಂದಾಯಿತ ಅರ್ಹ ಫಲಾನುಭವಿಗಳಾಗಿರುತ್ತಾರೆ. ಕೇಂದ್ರ ಸರ್ಕಾರದಿಂದ ವಾರ್ಷಿಕವಾಗಿ ರೂ.6000/-ಗಳ ಆರ್ಥಿಕ ನೆರವನ್ನು ನೀಡಲಾಗುತ್ತಿದೆ. ಸದರಿ ಅನುದಾನವನ್ನು ನಾಲ್ಕು ತಿಂಗಳಿಗೊಮ್ಮೆ ರೂ.2000/-ಗಳಂತೆ ಮೂರು ಕಂತುಗಳಲ್ಲಿ ನೀಡಲಾಗುತ್ತಿದೆ. |
| ಆ | ರಾಜ್ಯ ಸರ್ಕಾರ ಸದರಿ ಯೋಜನೆಯ ಅರ್ಹ ಫಲಾನುಭವಿಗಳಿಗೆ ನೀಡುತ್ತಿದ್ದ ಮೊತ್ತವೆಷ್ಟು; ರಾಜ್ಯ ಸರ್ಕಾರ ಸದರಿ ಯೋಜನೆಗೆ ಯಾವ ದಿನಾಂಕದಿಂದ ಹಣ ನೀಡಲು ಪ್ರಾರಂಭಿಸಿತು; ಯಾವ ದಿನಾಂಕದಂದು ಹಣ ನೀಡುವುದನ್ನು ಸ್ಥಗಿತಗೊಳಿಸಿತು; | ಭಾರತ ಸರ್ಕಾರದಿಂದ ಅನುಮೋದಿಸಲ್ಪಟ್ಟ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಅರ್ಹ ರೈತ ಕುಟುಂಬಗಳಿಗೆ ಪಿ.ಎಂ.ಕಿಸಾನ್ – ಕರ್ನಾಟಕ ಯೋಜನೆಯಡಿ ರಾಜ್ಯ ಸರ್ಕಾರವು ದಿನಾಂಕ:14.08.2019 ರಿಂದ ಹೆಚ್ಚುವರಿಯಾಗಿ ರೂ.4000/- ಗಳ ಆರ್ಥಿಕ ನೆರವನ್ನು ನೀಡಿದ್ದು, ಈ ಅನುದಾನವನ್ನು ಎರಡು ಕಂತುಗಳಲ್ಲಿ ರೈತರ ಬ್ಯಾಂಕ್ ಖಾತೆಗಳಿಗೆ ನೇರ ನಗದು ವರ್ಗಾವಣೆ ಮೂಲಕ 2022-23 ಆರ್ಥಿಕ ವರ್ಷದವರೆಗೆ ಜಮಾ ಮಾಡಲಾಗಿದೆ.<br><br>ಪ್ರಸ್ತುತ, 2023-24ನೇ ಸಾಲಿನಿಂದ ಈ ಯೋಜನೆಗೆ ರಾಜ್ಯ ಸರ್ಕಾರದ ಹೆಚ್ಚುವರಿ ಅನುದಾನವನ್ನು ಒದಗಿಸಲಾಗಿರುವುದಿಲ್ಲ. |
| ಇ | 2019 ರಿಂದ ರಾಜ್ಯ ಸರ್ಕಾರ ಸದರಿ ಯೋಜನೆಗೆ ನೀಡುತ್ತಿದ್ದ ಅನುದಾನವೆಷ್ಟು; (ವರ್ಷವಾರು ವಿವರ ನೀಡುವುದು) | 2019 ರಿಂದ ರಾಜ್ಯ ಸರ್ಕಾರದಿಂದ ಸದರಿ ಯೋಜನೆಯಡಿ ನೀಡುತ್ತಿದ್ದ ಆರ್ಥಿಕ ನೆರವು ವರ್ಗಾವಣೆಯ ವರ್ಷಾವಾರು ವಿವರಗಳು ಈ ಕೆಳಗಿನಂತಿದೆ. |

| ವರ್ಷ | ರಾಜ್ಯ ಸರ್ಕಾರ ನೀಡಿರುವ ಅನುದಾನ (ರೂ. ಕೋಟಿಗಳಲ್ಲಿ) |
|---|---|
| 2019-20 | 905.75 |
| 2020-21 | 994.89 |
| 2021-22 | 1975.12 |
| 2022-23 | 1917.59 |
| **ಒಟ್ಟು** | **5793.54** |

<table>
<tr>
<td>ಈ</td>
<td>2023-24 ರಲ್ಲಿ ಕೃಷಿ ಭಾಗ್ಯ ಯೋಜನೆಗೆ ಬಿಡುಗಡೆಯಾದ ಅನುದಾನವೆಷ್ಟು; ಕೃಷಿ ಭಾಗ್ಯ ಯೋಜನೆಯಲ್ಲಿ ಯಾವ ಉದ್ದೇಶಗಳಿಗಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ;</td>
<td>ಕರ್ನಾಟಕದ ಮಳೆಯಾಶ್ರಿತ ಪ್ರದೇಶಗಳಲ್ಲಿ ಸುಸ್ಥಿರ ಕೃಷಿಯನ್ನು ಸ್ಥಾಪಿಸಲು, ಕೃಷಿ ಭಾಗ್ಯ ಯೋಜನೆಯನ್ನು ಮರುಜಾರಿಗೊಳಿಸಲಾಗಿದ್ದು, 2023-24 ನೇ ಸಾಲಿನಲ್ಲಿ "ರಾಜ್ಯ ಮಳೆಯಾಶ್ರಿತ ಕೃಷಿ ನೀತಿ, 2014" ರನ್ವಯ ರಾಜ್ಯದ 24 ಜಿಲ್ಲೆಯ 106 ತಾಲ್ಲೂಕುಗಳಲ್ಲಿ ಕ್ರಿಯಾಯೋಜನೆಯನ್ವಯ ಪ್ಯಾಕೇಜ್ ಮಾದರಿಯಲ್ಲಿ ಅನುಷ್ಠಾನ ಮಾಡಲು ರೂ.100.00 ಕೋಟಿಗಳ ಅನುದಾನವನ್ನು ನಿಗದಿಪಡಿಸಿದ್ದು, ಈವರೆಗೆ ರೂ.50.00 ಕೋಟಿ ಅನುದಾನ ಬಿಡುಗಡೆಯಾಗಿರುತ್ತದೆ .<br><br>ಕೃಷಿ ಭಾಗ್ಯ ಪ್ಯಾಕೇಜ್ ನ ಈ ಕೆಳಗಿನ ಘಟಕಗಳ ಅನುಷ್ಠಾನಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗುತ್ತದೆ.<br>• ಕ್ಷೇತ್ರ ಬದು.<br>• ನೀರು ಸಂಗ್ರಹಣಾ ರಚನೆ (ಕೃಷಿ ಹೊಂಡ )<br>• ನೀರು ಇಂಗದಂತೆ ತಡೆಯಲು ಪಾಲಿಥೀನ್ ಹೊದಿಕೆ.<br>• ಕೃಷಿ ಹೊಂಡದ ಸುತ್ತಲೂ ತಂತಿ ಬೇಲಿ (GI Wire Fencing)<br>• ಹೊಂಡದಿಂದ ನೀರು ಎತ್ತಲು ಡೀಸೆಲ್ /ಪೆಟ್ರೋಲ್/ಸೋಲಾರ್ ಪಂಪ್ ಸೆಟ್</td>
</tr>
<tr>
<td>ಉ</td>
<td>ಪ್ರಸ್ತುತ ಕೃಷಿ ಭಾಗ್ಯ ಚಟುವಟಿಕೆಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು 2019 ರಿಂದ 2022 ರ ವರೆಗೆ ಯಾವ ಯೋಜನೆಯ ಹೆಸರಿನಲ್ಲಿ ನೀಡಲಾಗುತ್ತಿತ್ತು; ಅದರ ಮೊತ್ತವೆಷ್ಟು ವರ್ಷವಾರು ವಿವರ ನೀಡುವುದು;</td>
<td>ಪ್ರಸ್ತುತ ಕೃಷಿ ಭಾಗ್ಯ ಚಟುವಟಿಕೆಗೆ ಬಿಡುಗಡೆ ಮಾಡುತ್ತಿರುವ ಅನುದಾನವನ್ನು 2019-20 ಹಾಗೂ 2020-21 ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯ ಹೆಸರಿನಲ್ಲಿಯೇ ಬಿಡುಗಡೆ ಮಾಡಲಾಗಿರುತ್ತದೆ.<br><br>2021-22 ಮತ್ತು 2022-23ನೇ ಸಾಲಿನಲ್ಲಿ ಕೃಷಿ ಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡಿರುವುದಿಲ್ಲ ಹಾಗೂ ಯಾವುದೇ ಅನುದಾನ ಬಿಡುಗಡೆ ಆಗಿರುವುದಿಲ್ಲ. ವರ್ಷಾವಾರು ವಿವರ ಕೆಳಕಂಡಂತಿದೆ<br>
<table>
<tr><th>ಕ್ರ.ಸಂ</th><th>ವರ್ಷ</th><th>ಅನುದಾನ (ರೂ.ಕೋಟಿಗಳಲ್ಲಿ)</th></tr>
<tr><td>1</td><td>2019-20</td><td>250.00</td></tr>
<tr><td>2</td><td>2020-21</td><td>35.40</td></tr>
</table>
</td>
</tr>
</table>

*ಕೃ ಇ 36 ಎಎಂಎಸ್ 2024*

19/2

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು